# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: IBM ಇಂಡಿಯಾ ಸಂಸ್ಥೆಯು, ಕೃಷಿ ಬೆಳೆಗಳ ವಿಸ್ತೀರ್ಣ, ಆರೋಗ್ಯ ಸ್ಥಿತಿಗತಿ, ಇಳುವರಿ ಹಾಗೂ ಉತ್ಪಾದನೆಗಳನ್ನು ಅತ್ಯಾಧುನಿಕ ಕಂಪ್ಯೂಟರ್ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ (Artificial Intelligence) ಯಾಂತ್ರಿಕ ಕಲಿಕೆ (Machine Leveraging) ಅಳವಡಿಸಿ ಉತ್ಪನ್ನಗಳ ಪೂರೈಕೆ ಹಾಗೂ ಇಳುವರಿ ಅಂದಾಜು ಮಾಡುವ ಯೋಜನೆ ಕಾರ್ಯಾನುಷ್ಠಾನದ ಕುರಿತು.

ಓದಲಾಗಿದೆ:
1. ಕೃಷಿ ಬೆಲೆ ಆಯೋಗದ ಪತ್ರ ಸಂಖ್ಯೆ: KAPC/IBM/2018-19 ದಿನಾಂಕ 17.09.2018.
2. ಅಧಿಸೂಚನೆ ಸಂಖ್ಯೆ: ಆಇ 1097 ವೆಚ್ಚ-12/18 ದಿನಾಂಕ 30.10.2018.
3. ಅಧಿಸೂಚನೆ ಸಂಖ್ಯೆ: ಆಇ 658 ವೆ-12/19 ದಿನಾಂಕ 03.07.2019
4. ಕೃಷಿ ಆಯುಕ್ತರವರ ಪತ್ರ ಸಂಖ್ಯೆ: ಕಕೃಬೆಆ/ IBM/2019-20 ದಿನಾಂಕ 16.05.2019.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಪತ್ರದಲ್ಲಿ, ಕರ್ನಾಟಕ ಕೃಷಿ ಬೆಲೆ ಆಯೋಗವು IBM ಸಂಸ್ಥೆಯ ಸಹಯೋಗದೊಂದಿಗೆ ಕೃಷಿ ಕ್ಷೇತ್ರದಲ್ಲಿ Acreage Estimation, Crop Health Status and Agricultural Supply / Yield Projection Solution Leveraging AI/ML based IBM Decision Platform for Agri Business ಯೋಜನೆಗೆ IBM ಸಂಸ್ಥೆಯೊಂದಿಗೆ ರೂ.42.00 ಲಕ್ಷಗಳ ವೆಚ್ಚದಲ್ಲಿ ದಿನಾಂಕ 24.12.2018 ರಂದು ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ವೆಚ್ಚವನ್ನು 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ: 2401-00-102-0-28ರ ಉ.ಶೀ-103 ರಡಿ ಶೇ.50 ರಷ್ಟು ಅನುದಾನ ರೂ.21.00 ಲಕ್ಷವನ್ನು 2018-19ನೇ ಸಾಲಿನಲ್ಲಿ ಹಾಗೂ ಇನ್ನುಳಿದ ಶೇ.50 ರಷ್ಟು ಅನುದಾನ ರೂ.21.00 ಲಕ್ಷಗಳನ್ನು 2019-20ನೇ ಸಾಲಿನಲ್ಲಿ IBM ಸಂಸ್ಥೆಗೆ ಬಿಡುಗಡೆ ಮಾಡಲು ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಅಧಿಸೂಚನೆಯಲ್ಲಿ, ಸದರಿ ಯೋಜನೆ ಕುರಿತಾದ ಸೇವೆಯನ್ನು IBM ವತಿಯಿಂದ ರೂ.42.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 1999 ಕಲಂ-4(ಜ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕೃಷಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಮೇಲೆ ಓದಲಾದ (3)ರ ತಿದ್ದುಪಡಿಯಲ್ಲಿ ಅಧಿಸೂಚನೆ ಸಂಖ್ಯೆ: ಆಇ 1097 ವೆಚ್ಚ-12/18 ದಿನಾಂಕ 30.10.2018 ರಲ್ಲಿನ ಮೂರನೇ ಸಾಲಿನಲ್ಲಿ ನಮೂದಿಸಿರುವ "ರೂ.42.00" ಲಕ್ಷಗಳ ಪದದ ನಂತರದಲ್ಲಿ "ಜಿ.ಎಸ್.ಟಿ" ಹೊರತುಪಡಿಸಿ ಎಂದು ತಿದ್ದುಪಡಿ ಮಾಡಲಾಗಿದೆ.

..2)

ಮೇಲೆ ಓದಲಾದ (4)ರ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು IBM India Private Ltd., ಬೆಂಗಳೂರು ರವರ ನಡುವಿನ ಒಡಂಬಡಿಕೆಯಂತೆ Phase-1 ರ ಯೋಜನೆಯ ವೆಚ್ಚ ರೂ.21.00 ಲಕ್ಷಗಳು, Phase-2 ರ ಯೋಜನಾ ವೆಚ್ಚ ರೂ.20.925 ಲಕ್ಷ ಹಾಗೂ ಶೇ.18 ರಂತೆ GST 7,54,650 ರೂಪಾಯಿಗಳನ್ನೊಳಗೊಂಡಂತೆ (ಏಳು ಲಕ್ಷದ ಐವತ್ತನಾಲ್ಕು ಸಾವಿರದ ಆರುನೂರ ಐವತ್ತು ರೂಪಾಯಿಗಳು ಮಾತ್ರ) ಒಟ್ಟು ಯೋಜನಾ ವೆಚ್ಚ 49,47,150 ರೂಪಾಯಿಗಳನ್ನು ಸರ್ಕಾರ ಭರಿಸಬೇಕಾಗಿದ್ದು, ಈ ಯೋಜನೆಯನ್ನು 2018-19ರ ಬದಲಾಗಿ 2019-20ನೇ ಸಾಲಿಗೆ ವಿಸ್ತರಿಸಿ, Phase-1 ರ ಯೋಜನಾ ವೆಚ್ಚ ಶೇ.50 ರಷ್ಟು ಸಹಾಯಾನುದಾನ, GST ದರವನ್ನು ಒಳಗೊಂಡಂತೆ ಮೊದಲನೇ ಕಂತಿನ ಸಹಾಯಧನ ಬಿಡುಗಡೆ ಸಂಬಂಧ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಶವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕೃಇ 124 ಕೃಯೋಕಾ 2018, ಬೆಂಗಳೂರು, ದಿನಾಂಕ 31.07.2019</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, IBM ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಕೃಷಿ ಬೆಳೆಗಳ ವಿಸ್ತೀರ್ಣ, ಆರೋಗ್ಯ ಸ್ಥಿತಿಗತಿ, ಇಳುವರಿ ಹಾಗೂ ಉತ್ಪಾದನೆಗಳನ್ನು ಅತ್ಯಾಧುನಿಕ ಕಂಪ್ಯೂಟರ್ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ (Artificial Intelligence) ಯಾಂತ್ರಿಕ ಕಲಿಕೆ (Machine Leveraging) ಅಳವಡಿಸಿ ಉತ್ಪನ್ನಗಳ ಪೂರೈಕೆ ಹಾಗೂ ಇಳುವರಿ ಅಂದಾಜು ಮಾಡುವ ಕಾರ್ಯಕ್ರಮವನ್ನು 2018-19ರ ಬದಲಾಗಿ 2019-20ನೇ ಸಾಲಿಗೆ ವಿಸ್ತರಿಸಲು ಸರ್ಕಾರ ಸಹಮತಿಸಿ, ಈ ಕಾರ್ಯಕ್ರಮದ ಒಟ್ಟು ಯೋಜನಾ ವೆಚ್ಚ ರೂ.42.00 ಲಕ್ಷಗಳಲ್ಲಿ Phase-1 ರ ಯೋಜನಾ ವೆಚ್ಚದ ಶೇ.50 ರಷ್ಟು ರೂ.21.00 ಲಕ್ಷ ಹಾಗೂ GST ರೂ.3.78 ಲಕ್ಷ ಒಳಗೊಂಡಂತೆ ಒಟ್ಟು ರೂ.24.78 (ಇಪ್ಪತ್ತನಾಲ್ಕು ಲಕ್ಷದ ಎಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಲಕ್ಷಗಳನ್ನು 2019-20ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ: 2401-00-102-0-28ರ ಉ.ಶೀ-103 ರಡಿ ವೆಚ್ಚ ಭರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

1. Phase-1 ರಲ್ಲಿ (ಗರಿಷ್ಠ 6 ತಿಂಗಳು) ನಮೂದಿಸಿದ ಕಾರ್ಯ ಪೂರ್ಣಗೊಂಡ ನಂತರವಷ್ಟೇ ಅನುದಾನ ಬಿಡುಗಡೆ ಮಾಡುವುದು.
2. Phase-1ರ ಅನುಷ್ಠಾನದ ನಂತರ ರೈತರಿಗೆ ಮತ್ತು ಇಲಾಖೆಗೆ ದೊರೆಯಬಹುದಾದ ಪ್ರಯೋಜನೆಗಳು ಹಾಗೂ ಫಲಶ್ರುತಿಯ (Outcome) ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
3. ಯೋಜನೆಯ ಸಂಬಂಧ ಬಿಡುಗಡೆ ಮಾಡಿದ ಸಹಾಯಾನುಧಾನದ ಬಿಲ್ಲುಗಳಿಗೆ ಆಯುಕ್ತರು / ಕೃಷಿ ನಿರ್ದೇಶಕರು ಮೇಲು ಸಹಿ ಮಾಡಿ ಸರ್ಕಾರಕ್ಕೆ ಸಲ್ಲಿಸುವುದು.
4. ಈ ಯೋಜನೆಯನ್ನು ಸರ್ಕಾರವು ನೀಡಿರುವ ನಿಗದಿತ ಗಡುವಿನೊಳಗೆ (2019-20) ಸಂಪೂರ್ಣಗೊಳಿಸತಕ್ಕದ್ದು.
5. ಸದರಿ ಯೋಜನೆಯನ್ನು ನಿಗದಿತ ಗಡುವಿನೊಳಗೆ ಒದಗಿಸಿರುವ ಒಟ್ಟು ಅನುದಾನದ ಮಿತಿಯೊಳಗೆ ಪೂರೈಸುವುದು.

..3)

6. ಈ ಯೋಜನೆಗೆ ತಗಲುವ ಅನುದಾನವನ್ನು ಕರ್ನಾಟಕ ಕೃಷಿ ಬೆಲೆ ಆಯೋಗಕ್ಕೆ ಒದಗಿಸಿರುವ ಅನುದಾನದಿಂದಲೇ ಭರಿಸತಕ್ಕದ್ದು ಹಾಗೂ ಸರ್ಕಾರವು ಇದಕ್ಕೆ ಹೆಚ್ಚುವರಿ ಅನುದಾನವನ್ನು ಒದಗಿಸುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1097 ವೆಚ್ಚ-12/2018 ದಿನಾಂಕ 30-10-2018, ಸಂಖ್ಯೆ: ಆಇ 658 ವೆಚ್ಚ-12/19 ದಿನಾಂಕ 03.07.2019 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2019 ದಿನಾಂಕ 04-07-2019 ರನ್ವಯ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

31/7/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
2. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
7. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
14. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
15. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ-1 & 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
17. M/s. IBM India Private Ltd., ಬೆಂಗಳೂರು
18. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.